**ದಿನಾಂಕಃ 21.01.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಪಾಟೀಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

ನಾನು ವ್ಯವಸಾಯ ಮಾಡುತ್ತೇನೆ. ನನ್ನ ಬಳಿ 5 ಎಕರೆ ತೋಟ ಇದೆ. ಜಮೀನಿನ ಮೇಲೆ ಸೇರಿ ಒಟ್ಟು 40 ಸಾವಿರ ರೂ ಬೆಳೆ ಸಾಲ ಇದೆ. 4-5 ವರ್ಷದ ಹಿಂದೆ ಮಾಡಿರುತ್ತೇನೆ. 2020 ಕ್ಕಿಂತ ಮುಂಚಿನಿಂದಲೂ ಮಾಡಿರುತ್ತೇನೆ. ಆ ಸಾಲ ತೀರುವಳಿ ಆಗಿರುವುದಿಲ್ಲ. ನಾನು ಬಿಪಿಎಲ್ ಕಾರ್ಡನ್ನು ಹೊಂದಿರುತ್ತೇನೆ. ಮೊದಲು ಹಸಿರು ಕಾರ್ಡ್ ಇತ್ತು. 20 ವರ್ಷದಿಂದ ಬಿಪಿಎಲ್ ಕಾರ್ಡನ್ನು ಹೊಂದಿರುತ್ತೇನೆ. ಸರ್ಕಾರದಿಂದ ಸೌಲಭ್ಯವನ್ನು ತೆಗೆದುಕೊಂಡಿರುತ್ತೇನೆ. 1ನೇ ಪ್ರತಿವಾದಿಯ ತಂಗಿ ದ್ಯಾವಮ್ಮ ನನಗೆ ಪತ್ನಿ. ದ್ಯಾವಮ್ಮನ ಮನೆಯಲ್ಲೂ ಒಟ್ಟು ಕುಟುಂಬದ ಆಸ್ತಿ ಇದೆ ಎಂದರೆ ಸರಿ. ದಾವಾ ಷೆಡ್ಯೂಲ್ ಸ್ವತ್ತು ಮೂಲತಃ ಪಾರ್ವತಮ್ಮರವರಿಗೆ ಸೇರಿದ್ದು ಅದು ಸ್ವಯಾರ್ಜಿತವಾದದ್ದು. 15-20 ವರ್ಷದ ಹಿಂದೆ ಪಾರ್ವತಮ್ಮ ಖರೀದಿ ಮಾಡಿರುತ್ತಾರೆ. ಅವರ ಹೆಸರಿಗೆ ಖಾತೆ ಯಾವ ವರ್ಷದಲ್ಲಿ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ನಾನು ಕೇಸು ಹಾಕುವುದಕ್ಕಿಂತ ಮುಂಚೆ ಆಗಲಿ ಆಮೇಲೆ ಆಗಲಿ ಪಾರ್ವತಮ್ಮರವರ ಹೆಸರಿಗೆ ಯಾವಾಗ ಖಾತೆ ಆಗಿರುತ್ತದೆ ಎಂದು ತಿಳಿದುಕೊಂಡಿರುವುದಿಲ್ಲ. ಐಟಂ ನಂ. 1 ಅನ್ನು ಮರಿಯಪ್ಪರವರ ಮಗ ಶೇಖರೇಗೌಡರವರಿಂದ ಖರೀದಿ ಮಾಡಿರುತ್ತಾರೆ. ಯಾವ ವರ್ಷ ಖರೀದಿ ಮಾಡಿರುತ್ತಾರೆ ಎಂದು ಗೊತ್ತಿಲ್ಲ. ನಾನು ಕ್ರಯಪತ್ರವನ್ನು ನೋಡಿರುವುದಿಲ್ಲ. ಐಟಂ ನಂ. 2 ಯಾವ ಆಧಾರದ ಮೇಲೆ ಪಾರ್ವತಮ್ಮ ಹೆಸರಿಗೆ ಖಾತೆ ಆಗಿರುತ್ತದೆ ಎಂದು ಗೊತ್ತಿರುವುದಿಲ್ಲ ಆದರೆ ಪಹಣಿ ಇರುತ್ತದೆ. ಅದರ ಮ್ಯುಟೇಷನ್ ಅನ್ನು ನಾನು ಪರೀಶೀಲನೆ ಮಾಡಿರುವುದಿಲ್ಲ. ಪಾರ್ವತಮ್ಮರವರಿಗೆ ಕ್ರಯದ ಮೂಲಕ ಬಂದಿದ್ದು ಅದರ ಪತ್ರವನ್ನು ನೊಡಿರುವುದಿಲ್ಲ. ಪಾರ್ವತಮ್ಮರವರಿಗೆ 3 ಜನ ಹೆಣ್ಣು ಮಕ್ಕಳು 1 ಗಂಡು ಮಗ ಎಂದರೆ ಸರಿ . ಅನಿತರವರ ಮದುವೆ 2001 ರಲ್ಲಿ ಆಗಿರುತ್ತದೆ ಎಂದರೆ

ಸರಿ . 2ನೇ ಮಗಳು ವನಿತಾ 2002 ರಲ್ಲಿ ಮದುವೆ ಆಗಿರುತ್ತದೆ ಎಂದರೆ ಸರಿ 3 ನೇ ಮಗಳು ನೇತ್ರಾ ಇವರ ಮದುವೆ 2010 ರಲ್ಲಿ ಆಗಿರುತ್ತದೆ ಎಂದರೆ ಸರಿ ಸಂತೋಷರವರ ಮದುವೆ 2018 ರಲ್ಲಿ ಆಗಿರುತ್ತದೆ ಎಂದರೆ ಸರಿಯಲ್ಲ ಇತ್ತೀಚೆಗೆ ಆಗಿರುತ್ತದೆ 2020 ರ ಇಚೆಗೆ ಆಗಿರುತ್ತದೆ ನಿರ್ದಿಷ್ಟವಾಗಿ ಗೊತ್ತಿಲ್ಲ. ಸಂತೋಷರವರು ಏನು ಕೆಲಸ ಮಾಡುತ್ತಿದ್ದಾರೆ ಎಂದು ಗೊತ್ತಿಲ್ಲ. ಅನಿತಾ ವನಿತಾ ನೇತ್ರಾರವರನ್ನು ಒಳ್ಳೆ ಮನೆಗೆ ಕೊಡಲಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಪಾರ್ವತಮ್ಮರವರಿಗೆ ಮುಂಬೈಯಲ್ಲಿ ಆಸ್ತಿ ಇರುತ್ತದೆ ಎಂದು ಹೇಳುತ್ತಾರೆ. 25 ವರ್ಷದ ಹಿಂದೆ ಬಾಂಬೆಗೆ ಅವರ ಮನೆಗೆ ಹೋಗಿರುತ್ತೇನೆ. ಅವರದು ಸ್ವಂತ ಮನೆನಾ ಅಥವಾ ಬಾಡಿಗೆ ಮನೆನಾ ಎಂದು ಗೊತ್ತಿಲ್ಲ. ಬಾಂಬೆಯಲ್ಲಿ ಆಸ್ತಿ ಖರೀದಿ ಮಾಡಿರುತ್ತೇನೆ ಎಂದು ಹೇಳಿದ್ದರು. ಆದರೆ ಎಲ್ಲಿ ಯಾವಾಗ ಎಂದು ಗೊತ್ತಿಲ್ಲ. ಪಾರ್ವತಮ್ಮನ ಹೆಸರಿನಲ್ಲಿ ಬಾಂಬೆಯಲ್ಲಿ ಯಾವುದೇ ಮನೆ ಇಲ್ಲ ಎಂದರೆ ಸರಿಯಲ್ಲ. ಪಾರ್ವತಮ್ಮರವ ರ ಜಮೀನು ವಡ್ಡರಹಳ್ಳಿ ಶಾಖೆಯ ಪಿಎಸಿಸಿಎಸ್ ಬ್ಯಾಂಕಿಗೆ ಆಧಾರ ಆಗಿರುತ್ತದೆ ಎಂದರೆ ಬೆಳೆ ಸಾಲ ಪಡೆದಿರುತ್ತಾರೆ ಎಂದು ಹೇಳುತ್ತಾರೆ. ಪಹಣಿಯನ್ನು ನೋಡಿರುತ್ತೇನೆ. ಬ್ಯಾಂಕ್ ನಲ್ಲಿ ಇದರ ಬಗ್ಗೆ ವಿಚಾರಿಸಿದ್ದೇನೆ ಆಗ ಪಾರ್ವತಮ್ಮರವರು ಕ್ಲೀಯರ್ ಮಾಡಿಕೊಡುತ್ತೇನೆ ಎಂದು ಹೇಳಿರುತ್ತಾರೆ. ಪಾರ್ವತಮ್ಮರವರ ಅಗ್ರಿಮೆಂಟ್ ಊರಲ್ಲಿ ಆಗಿರುತ್ತದೆ. ಅಗ್ರಿಮೆಂಟ್ ಆಗುವ 15 ದಿನ ಮುಂಚೆ ಮಾತುಕತೆ ಆಗಿರುತ್ತದೆ. ಪಾರ್ವತಮ್ಮ ಮನೆ ಹತ್ತಿರ ಮಾತುಕತೆ ಆಗಿರುತ್ತದೆ. ಯಾವ ದಿನಾಂಕದಂದು ಮಾತುಕತೆ ಆಗಿರುತ್ತದೆ ಎಂದು ನಿರ್ದಿಷ್ಟವಾಗಿ ಹೇಳಲು ಸಾಧ್ಯವಿಲ್ಲ. ಮಾತುಕತೆಗೆ ಯಾರು ಯಾರು ಸೇರಿರುತ್ತಾರೆ ಎಂದರೆ ಕುಮಾರ, ಯೋಗೇಶ, ಮತ್ತ್ಯಾರು ಸೇರಿರುತ್ತಾರೆ ಎಂದರೆ ಊರಿನವರಿಬ್ಬರು ಸೇರಿದ್ದರು ಎಂದು ಹೇಳುತ್ತಾರೆ. ಒಂದೇ ದಿನ ಎರಡು ಜಮೀನಿನ ಮಾತುಕತೆ ಆಗಿರುತ್ತದೆ. ಪಾರ್ವತಮ್ಮರವರ ಜಮೀನಿನ ಮಾತುಕತೆ ಮಧ್ಯಾಹ್ನ ಆಗಿರುತ್ತದೆ. ಪಾರ್ವತಮ್ಮರವರ ಮನೆಯಿಂದ ಅವರ ಪತಿ ಸೇರಿದ್ದರು. ಅವರ ಮಕ್ಕಳು ಸೇರಿರುವುದಿಲ್ಲ. 5 ವರೆ ಲಕ್ಷಕ್ಕೆ ಮಾತುಕತೆ ಆಗಿರುತ್ತದೆ. ಕ್ರಯಪತ್ರ ನೊಂದಣಿ ಮಾಡಿಸುವ

ಬಗ್ಗೆ ಮಾತುಕತೆ ಆಗಿರುತ್ತದೆ ಒಂದು ವಾರದಲ್ಲಿ ನೊಂದಣಿ ಮಾಡಿಸಬೇಕು ಎಂದು ಆಗಿರುತ್ತದೆ. ಕ್ರಯಕರಾರು ಪತ್ರದ ಬಗ್ಗೆ ಮಾತುಕತೆ ಆಗಿರುತ್ತದೆ. ಎರಡು ಆಸ್ತಿಗಳು ಪಾರ್ವತಮ್ಮರವರ ಒಬ್ಬರೇ ಹೆಸರಿನಲ್ಲಿ ಇರುವುದರಿಂದ ನೇರವಾಗಿ ನೊಂದಣಿ ಮಾಡಿಸಬಹುದು ಎಂದರೆ ಪಾರ್ವತಮ್ಮರವರ ಕಾಲಾವಕಾಶ ಕೇಳಿರುತ್ತಾರೆ. ಯಾವ ಉದ್ದೇಶಕ್ಕಾಗಿ ಕಾಲಾವಕಾಶ ಕೇಳಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಕರಾರು ಪತ್ರ ಮಾಡಿಕೊಡಬೇಕೆಂದು ಮಾತುಕತೆ ಆಗಿರುತ್ತದೆ ಆದಾದ ನಂತರದಲ್ಲಿ ಕ್ರಯಪತ್ರ ಮಾಡಿಕೊಡುತ್ತೇವೆ ಎಂದು ಮಾತುಕತೆ ಆಗಿರುತ್ತದೆ. ಅಗ್ರಿಮೆಂಟ್ ಯಾವಾಗ ಮಾಡಬೇಕೆಂದು ಮಾತುಕತೆ ಆಗಿರುತ್ತದೆ. ಮಾತುಕತೆ ಆದಾಗ ಹಣವನ್ನು ಪಡೆದುಕೊಂಡಿರುವುದಿಲ್ಲ. ಮಾತುಕತೆ ಆಗುವಾಗ ನನ್ನ ಬಳಿ 5 ಲಕ್ಷ ಇತ್ತು. ಮನೆಯಲ್ಲಿ ಹಣ ಇಟ್ಟಿದ್ದೆ. ಬ್ಯಾಂಕಿನಲ್ಲಿ 4 ಲಕ್ಷ ಇತ್ತು. ಯಾನಿಯನ್ ಬ್ಯಾಂಕ್ ಡಿಸಿಸಿ ಬ್ಯಾಂಕ್ ನಲ್ಲಿ ಇತ್ತು. ಮಾತುಕತೆ ಆದ ಬಗ್ಗೆ ಹೆಣ್ಣು ಮಕ್ಕಳಿಗೆ ತಿಳಿಸಿರುವುದಿಲ್ಲ ಕಾರಣ ಅವರ ಸ್ವಯಾರ್ಜಿತ ಆಸ್ತಿ. ಮಾತುಕತೆಯ ನಂತರದಲ್ಲಿ ಕರಾರು ಪತ್ರ ಆಗುವಾಗಲು ಪಾರ್ವತಮ್ಮನ ಮಕ್ಕಳಿಗೆ ತಿಳಿಸಿರುವುದಿಲ್ಲ. ಕೇಸು ಹಾಕುವುದಕ್ಕೆ ಮುಂಚೆ ಆಗಲಿ ನಂತರದಲ್ಲಾಗಲಿ ಅವರಿಗೆ ತಿಳಿಸಿರುವುದಿಲ್ಲ. ಸಾಕ್ಷಿಯು ಮುಂದುವರೆದು ಪಾರ್ವತಮ್ಮರವರ ಸ್ವಂತ ಆಸ್ತಿ ಎಂದು ಹೇಳುತ್ತಾರೆ. ಮಾತುಕತೆ ಆಗುವ ಸಮಯದಲ್ಲಿ ನಾವು ಊರಲ್ಲಿ ಇದ್ದೆವು. ಮಾತುಕತೆ ಸಮಯದಲ್ಲಿ ಅದಕ್ಕೂ ಮುಂಚೆ ಮತ್ತು ನಂತರದಲ್ಲೂ ಪಾರ್ವತಮ್ಮ ಮತ್ತು ಅವರ ಪತಿ ಊರಲ್ಲಿ ಇದ್ದರು. ಮಾತುಕತೆ ಆದ ನಂತರ ಅಗ್ರಿಮೆಂಟ್ ಮಾಡಿಕೊಡಲು ಕೇಳಿರುತ್ತೇನೆ. ಎರಡು ಬಾರಿ ಅವರ ಮನೆಗೆ ಹೋಗಿ ಕೇಳಿರುತ್ತೇನೆ. ಅವರು ಕರಾರು ಪತ್ರವನ್ನು ಮಾಡಿಕೊಡುತ್ತೇವೆ ಎಂದು ಹೇಳಿರುತ್ತಾರೆ. ಯೋಗೇಶ್ ಮತ್ತು ಕುಮಾರ್ ರವರ ಮಧ್ಯಸ್ಥಿಕೆಯಲ್ಲಿ ಕರಾರು ಪತ್ರವನ್ನು ಮಾಡಿಕೊಟ್ಟಿರುತ್ತಾರೆ. ಕರಾರು ಪತ್ರಕ್ಕೆ ದಿನಾಂಕವನ್ನು ಹೇಳಿದ್ದು ಆ ದಿನಾಂಕದಂದು ಯೋಗೇಶ್ ಕುಮಾರ್ ಬಂದಿರುತ್ತಾರೆ. ಕರಾರು ಪತ್ರದ ದಿನಾಂಕ 11.06.2021 . ನಾನು ಪಾರ್ವತಮ್ಮ ಅವರ ಪತಿ ಒಂದೇ ಊರಿನಲ್ಲೆ 10-15

ವರ್ಷದಿಂದ ವಾಸ ಇದ್ದೆವೆ. ಮಾತುಕತೆ ಆದ ಮೇಲೆ ನಾನು ಊರಿನಲ್ಲಿ ಪ್ರತಿವಾದಿ ಮತ್ತು ಪ್ರತಿವಾದಿಯ ಪತಿಯನ್ನು ನೋಡುತ್ತಿದ್ದೇನೆ. ಮುಂಬೈನಲ್ಲಿ ಮನೆ ಖರೀದಿ ಮಾಡಿದ್ದು ಅದಕ್ಕೆ ಹಣದ ಅವಶ್ಯಕತೆ ಇದ್ದಕಾರಣ ಕರಾರು ಪತ್ರ ಮಾಡಿಕೊಟ್ಟಿರುತ್ತಾರೆ. ಮಕ್ಕಳ ಮದುವೆಗೆ ಮಾಡಿದ ಸಾಲವನ್ನು ತೀರಿಸುವ ಸಲುವಾಗಿ ಎಂದು ಹೇಳಿರುತ್ತಾರೆ. ಎಷ್ಟು ಸಾಲ ಎಂದು ಅವರು ಹೇಳಿರುವುದಿಲ್ಲ ನಾವು ಕೇಳಿರುವುದಿಲ್ಲ. ಮೋಹನ್ ಕುಮಾರ್ ರವರ ಕಚೇರಿಯ ಬಳಿ ಅಗ್ರಿಮೆಂಟ್ ಆಗಿರುತ್ತದೆ. ಅವರ ಕಚೇರಿಯಲ್ಲಿ ಅವರ ನಾಮಫಲಕ ಇತ್ತಾ ಎಂದು ಕೇಳಿದಾಗ ನಾನು ಗಮನಿಸಿಲ್ಲ ಎಂದು ಹೇಳುತ್ತಾರೆ. ಸಾಕ್ಷಿಯು ಮುಂದುವರೆದು ಮೋಹನ್ ಕುಮಾರ್ ರವರ ಕಚೇರಿ ಎಲ್ಲಿದೆ ಎಂದು ಗೊತ್ತಿಲ್ಲ. ಮೋಹನ್ ಕುಮಾರ್ ರವರು ಪಾರ್ವತಮ್ಮ ಮತ್ತು ಅವರಪತಿಯವರಿಗೆ ಪರಿಚಿತರು ನನಗೆ ಪರಿಚಯ ಇರುವುದಿಲ್ಲ. ಮೋಹನ್ ಕುಮಾರ್ ರವರು ನ್ಯಾಯಾಲಯದ ಆವರಣದಲ್ಲಿ ಭೇಟಿ ಆಗಿರುತ್ತಾರೆ. ಬೆಳಿಗ್ಗೆ 9 ಗಂಟೆಗೆ ಬಂದಿರುತ್ತೇವೆ. ಪಾರ್ವತಮ್ಮ ಮತ್ತು ಅವರ ಪತಿ ಗುರಿಗಾರನಹಳ್ಳಿಯಿಂದ ಬಂದಿರುತ್ತಾರೆ ಸುಮಾರು 8.30 ಕ್ಕೆ ಬಂದಿರುತ್ತಾರೆ ನಾನು ಸಹ ಅದೇ ಸಮಯಕ್ಕೆ ಬಂದಿರುತ್ತೇನೆ. ಅಗ್ರಿಮೆಂಟ್ ಆಗುವ 2 ದಿನಗಳ ಹಿಂದೆ ಊರಲ್ಲೆ ಇದ್ದರೊ ಇಲ್ಲವೋ ನಾನು ಗಮನಿಸಿಲ್ಲ. ಯೋಗೇಶ್ ಕುಮಾರ್ ರವರು ಪ್ರತ್ಯೇಕವಾಗಿ ಬಂದಿರುತ್ತಾರೆ. ದಸ್ತವೇಜು ಪತ್ರವನ್ನು ತಂದಿರುತ್ತಾರೆ. ಸುಮಾರು 8.30 ಯಿಂದ 9ಗಂಟೆ ಸಮಯದಲ್ಲಿ ತಂದಿರುತ್ತಾರೆ. ಎಲ್ಲಿಂದ ತಂದಿರುತ್ತಾರೆ ಎಂದು ನಿರ್ದಿಷ್ಟವಾಗಿ ಗೊತ್ತಿಲ್ಲ. 500 ರೂ ಬೆಲೆಯ ಎರಡು ದಸ್ತವೇಜನ್ನು ತಂದಿರುತ್ತಾರೆ. ವಕೀಲರು ದಸ್ತವೇಜು ಪತ್ರವನ್ನು ತಂದಿರುತ್ತಾರೆ. ಕರಾರು ಪತ್ರವನ್ನು ಟೈಪ್ ಮಾಡುವಾಗ ನಾನು ಹೋಗಿದ್ದೆ ಎಲ್ಲಿ ಟೈಪ್ ಮಾಡಿದ್ದು ಎಂದರೆ ನ್ಯಾಯಾಲಯದ ಪಕ್ಕ. ಅಂಗಡಿಯ ಹೆಸರು ಟೈಪ್ ಮಾಡಿದವರು ಹೆಸರು ಗೊತ್ತಿಲ್ಲ. ವಕೀಲರು ಹೇಳಿ ಟೈಪ್ ಮಾಡಿಸಿರುತ್ತಾರೆ. ಕರಾರು ಪತ್ರದಲ್ಲಿ ನನ್ನ ಕುಟುಂಬಕ್ಕೆ ಸೇರಿದ ಸ್ವತ್ತುಗಳು ಎಂದು ನಮೂದು ಇರುತ್ತದೆ ಎಂದರೆ ಸರಿ ಸಾಕ್ಷಿಯು ಮುಂದುವರೆದು ಅದು ಸ್ವಯಾರ್ಜಿತ ಆಸ್ತಿ ಎಂದು ಹೇಳುತ್ತಾರೆ.

ಮೊದಲು ಕರಡು ಪ್ರತಿಯನ್ನು ತಯಾರಿಸಿರುವುದಿಲ್ಲ ನೇರವಾಗಿ ಟೈಪ್ ಮಾಡಿಸಿರುತ್ತಾರೆ. ಕರಾರು ಪತ್ರವನ್ನು ಓದಿರುತ್ತೇನೆಯೇ ಎಂದರೆ ಓದಿರುತ್ತೇನೆ. 9 ರಿಂದ 11 ಗಂಟೆಯವರೆಗೆ ಟೈಪ್ ಮಾಡಿಸಿರುತ್ತಾರೆ. ಆವಾಗ ಯೋಗೇಶ್ ಮತ್ತು ಕುಮಾರ್ ರವರು ಇದ್ದರು. ಆ ದಿನ ನಾನು 15 ಲಕ್ಷ ತಂದಿರುತ್ತೇನೆ. ಮನೆಯಿಂದ ತಂದಿದ್ದೆ. 4 ಲಕ್ಷ ಮೊದಲು ಇತ್ತು 11 ಲಕ್ಷ ಜೋಡಿಸಿ ತಂದಿರುತ್ತೇನೆ. ಸಾಲವನ್ನು ಯಾರ ಯಾರ ಹತ್ತಿರ ಪಡೆದುಕೊಂಡಿರುತ್ತೀರಿ ಎಂದರೆ ಇಬ್ಬರು ಅಳಿಯಂದಿರಿಂದ ತಲಾ 4 ಲಕ್ಷ ರೂ ಗಳನ್ನು ಪಡೆದಿರುತ್ತೇನೆ. ಉಳಿದ ಹಣ ಕಾಯಿ ರಾಗಿ ಮಾರಿ ಬಂದ ಹಣ ಆಗಿರುತ್ತದೆ. ಕರಾರು ಪತ್ರ ಆಗುವಾಗ ಸಂಪೂರ್ಣ ಹಣ ನನ್ನ ಬಳಿ ಇತ್ತು. ನನಗೆ ಕ್ರಯ ಪತ್ರ ಆಗಲೇ ಮಾಡಿಸಿಕೊಳ್ಳಲು ತೊಂದರೆ ಇರಲಿಲ್ಲ ಎಂದರೆ ಪಾರ್ವತಮ್ಮ ಕಾಲಾವಕಾಶ ಕೇಳಿರುತ್ತಾರೆ. ಕರಾರು ಪತ್ರದಲ್ಲಿ ಸಮಯವನ್ನು ನಿಗದಿ ಮಾಡಿರುವುದಿಲ್ಲ. ಆ ಸಮಯದಲ್ಲಿ ಬ್ಯಾಂಕಿನಿಂದ ಹಣವನ್ನು ಡ್ರಾ ಮಾಡಿರುತ್ತೇನೆ. ಬ್ಯಾಂಕ್ ಸ್ಟೇಟ್ ಮೆಂಟನ್ನು ಹಾಜರು ಪಡಿಸಲು ತೊಂದರೆ ಇರುವುದಿಲ್ಲ. 27 ಗುಂಟೆಯ ಚಕ್ಕುಬಂದಿ ಗೊತ್ತು. ಆ ಜಾಗದಲ್ಲಿ  40 ತೆಂಗಿನ ಮರಗಳು ಇದ್ದವು. ಈಗ ಫಲವನ್ನು ಕೊಡುತ್ತಿವೆ. 27 ಗುಂಟೆ ಜಮೀನು ಭಾಗಾಯ್ತು ಎಂದರೆ ಮೊದಲು ಖುಷ್ಕಿ ಎಂದು ಹೇಳುತ್ತಾರೆ. ಪಹಣಿಯಲ್ಲಿ ಭಾಗಾಯ್ತು ಎಂದು ಕಾಣಿಸಿದ್ದಾರೆ ಎಂದರೆ ಅದು ತಪ್ಪಾಗಿ ನಮೂದಾಗಿರುತ್ತದೆ. ಕರಾರು ಪತ್ರದಲ್ಲಿ ಖುಷ್ಕಿ ಎಂದು ಕಾಣಿಸಿರುತ್ತೇವೆ. ಎರಡು ಜಮೀನು ಖುಷ್ಕಿ ಎಂದು ಕಾಣಿಸಿರುತ್ತೇವೆ. ಎರಡು ಕರಾರು ಪತ್ರದ ಹಣವನ್ನು ಒಟ್ಟಿಗೆ ಕೊಟ್ಟಿರುತ್ತೇವೆ. ರಾಗಿ ತೆಂಗು ಮಾರಾಟ ಮಾಡಿದ ಬಗ್ಗೆ ದಾಖಲಾತಿ ನನ್ನ ಬಳಿ ಇರುವುದಿಲ್ಲ. ನನ್ನ ಅಳಿಯಂದಿರನ್ನು ಸಾಕ್ಷಿದಾರರನ್ನಾಗಿ ವಿಚಾರಣೆ ಮಾಡಲು ತೊಂದರೆ ಇರುತ್ತದೆ. ಕರಾರು ಪತ್ರದಲ್ಲಿ ಪಾರ್ವತಮ್ಮನ ಸಹಿ ಮೊದಲನೆ ಪುಟಕ್ಕೂ ಎರಡನೆ ಪುಟಕ್ಕೂ ವ್ಯತ್ಯಾಸ ಇರುತ್ತದೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಮಾಡಿರುತ್ತಾರೆ. ಯೋಗೇಶ್ ಕುಮಾರ್ ರವರು ನನ್ನ ಸಮಕ್ಷಮ ಸಹಿ ಮಾಡಿರುತ್ತಾರೆ.

ಸತ್ಯಣಪ್ಪ ಅವರ ತಂದೆಯ ಕುಟುಂಬದಿಂದ ಆಸ್ತಿಗಳು ಬಂದಿರುತ್ತವೆ ಎಂದರೆ ಸರಿಯಲ್ಲ. ಅವರ ಒಟ್ಟು ಕುಟುಂಬದಲ್ಲಿ ಇರುತ್ತಾರೆ. ಸ್ವಲ್ಪ ಆಸ್ತಿ ಇರುತ್ತವೆ. ಆ ಆಸ್ತಿಗಳಲ್ಲಿ ಭಾಗ ಮಾಡಿಕೊಟ್ಟಿರುತ್ತಾರೆ ಯಾವಾಗ ಮಾಡಿಕೊಟ್ಟಿರುತ್ತಾರೆ ಎಂದು ಗೊತ್ತಿಲ್ಲ. ಆ ಜಮೀನನ್ನು ಸತ್ಯಣಪ್ಪರವರೇ ಸಾಗುವಳಿ ಮಾಡುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸತ್ಯಣಪ್ಪ ಜಮೀನಿನ ಪಹಣಿಯನ್ನು ನಾನು ನೋಡಿರುತ್ತೇನೆ. ಅವರ ಹೆಸರಿಗೆ ಕ್ರಯದ ಮೂಲಕ ಖಾತೆ ಆಗಿರುತ್ತದೆ ಯಾವ ವರ್ಷ ಎಂದು ಗೊತ್ತಿಲ್ಲ. ಯಾರಿಂದ ಯಾವ ವರ್ಷ ಎಂದು ಮ್ಯುಟೇಷನ್ ನೋಡಿಲ್ಲ. ಕ್ರಯಪತ್ರ ನೋಡಿರುವುದಿಲ್ಲ ಅವರು ಹೇಳಿದ್ದರಿಂದ ಗೊತ್ತು. ನಾನು ಖುದ್ದಾಗಿ ಕ್ರಯಪತ್ರವನ್ನು ನೋಡಿಲ್ಲ. ನನಗೆ ಮುಂಚೆ ಇಂದಲೂ ಅವರ ಸ್ವಂತ ಆಸ್ತಿ ಎಂದು ಗೊತ್ತು. ಸತ್ಯಣಪ್ಪರವರು ಅವರ ಜಮೀನನ್ನು ಮುಂಬೈಯಲ್ಲಿ ಮನೆ ತೆಗೆದುಕೊಂಡಿರುತ್ತೆವೆ ಅದಕ್ಕೆ ಹಣದ ಅವಶ್ಯಕತೆ ಇರುವುದರಿಂದ ಸ್ವತ್ತನ್ನು ಮಾರಾಟ ಮಾಡುತ್ತಿದ್ದೆವೆ ಎಂದು ಹೇಳಿರುತ್ತಾರೆ. ಬಾಂಬೆಯಲ್ಲಿ ಎಲ್ಲಿ ಯಾವ ಮನೆ ಎಂದು ಗೊತ್ತಿಲ್ಲ. ಪಾರ್ವತಮ್ಮ ಗೃಹಿಣಿ ಎಂದರೆ ಸರಿ. ಜಮೀನನ್ನು ಸತ್ಯಣಪ್ಪರವರು ಕುಟುಂಬದ ಆದಾಯದಿಂದ ಖರೀದಿ ಮಾಡಿದ್ದು ಎಂದರೆ ನನಗೆ ಗೊತ್ತಿಲ್ಲ. ಕುಟುಂಬದ ವ್ಯವಹಾರವನ್ನು ಅವರೇ ಮಾಡುತ್ತಾರೆ ಎಂದರೆ ಸರಿ. ಮಾತುಕತೆ ಆಗುವಾಗ ಯಾವಾಗ ಕ್ರಯಪತ್ರ ಮತ್ತು ಕರಾರು ಪತ್ರ ಮಾಡಬೇಕೆಂದು ಸಮಯ ನಿಗದಿ ಆಗಿರುವುದಿಲ್ಲ. ಒಟ್ಟಿಗೆ ಪತಿ ಪತ್ನಿಯರಿಬ್ಬರು ಕರಾರು ಪತ್ರ ಆಗುವಾಗ ಬಂದಿದ್ದರು ಎರಡು ಕರಾರು ಪತ್ರವನ್ನು ಮೋಹನ್ ಕುಮಾರ್ ರವರೇ ಮಾಡಿರುತ್ತಾರೆ. ಒಂದಾದ ನಂತರ ಮತ್ತೊಂದು ಮಾಡಿರುತ್ತಾರೆ. ಯೋಗೇಶ್ ರವರು ನನಗೆ ಸಂಬಂಧಿಕರು ಪಾರ್ವತಮ್ಮರವರ ಪತಿಗೆ ಪರಿಚಯ. ಕುಮಾರ್ ರವರು ಪಾರ್ವತಮ್ಮರವರಿಗೆ ಸ್ವಂತ ತಮ್ಮ ನನಗೆ ಸಂಬಂಧಿಕರು. ಎರಡು ಕರಾರು ಪತ್ರಕ್ಕೆ ಮುಂಗಡ ಹಣವನ್ನು ಮನೆಗೆ ತಂದಿಟ್ಟಿರುತ್ತೇನೆ. ಎರಡು ದಸ್ತವೇಜು ಪತ್ರವನ್ನು ಸತ್ಯಣಪ್ಪರವರು ತಂದಿರುತ್ತಾರೆ. ನಾನು ಬೇರೆ ಬೇರೆ ಆಸ್ತಿಗಳನ್ನು ಖರೀದಿ

ಮಾಡಿರುತ್ತೇನೆ. 2 ಲಕ್ಷಕ್ಕಿಂತ ಮೇಲೆ ಹಣವನ್ನು ಕೊಡಬೇಕಾದರೆ ಚೆಕ್ ಅಥವಾ ಡಿಡಿ ಮೂಲಕ ಕೊಡಬೇಕಾಗುತ್ತದೆ ಎಂದರೆ ಅದು ಕರಾರು ಪತ್ರ ಮಾಡಿಕೊಡಬೇಕಾದರೆ ಕೊಡಬೇಕಾಗುತ್ತದೆ ಎಂದು ಹೇಳುತ್ತಾರೆ. ನಾನು ಆದಾಯ ತೆರಿಗೆ ಪಾವತಿದಾರ ಅಲ್ಲ. ನಿಪಿ 6 ಮೊದಲನೆ ಪುಟದ ಸಹಿಗೂ ಎರಡನೇ ಪುಟದ ಸಹಿಗೂ ವ್ಯತ್ಯಾಸ ಇರುತ್ತದೆ ಎಂದರೆ ಸರಿಯಲ್ಲ. ಆ ದಿನ ಸತ್ಯಣಪ್ಪ ಮತ್ತು ಪಾರ್ವತಮ್ಮ ರವರು ದಸ್ತವೇಜು ಪತ್ರ ಖರೀದಿ ಮಾಡಿದ್ದು ಹಾಗೂ ಕರಾರುಪತ್ರವನ್ನು ಬರೆದು ಕೊಟ್ಟಿದು ಎಂದರೆ ಸರಿಯಲ್ಲ. ನಾನು ಅವರ ಸಹಿಯನ್ನು ನಕಲು ಮಾಡಿರುತ್ತೇನೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಾಕಾಶ ಕೋರಿದ್ದು, ಕಾಲಾವಾಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದಂತೆ ಗಣಕೀಕರಣಗೊಳಿಸಿ ಮುದ್ರಿಸಲಾಯಿತು.)

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ
ನ್ಯಾಯಾಧೀಶರು, ಚನ್ನರಾಯಪಟ್ಟಣ